ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-4 Issue 6, May-June, 2023, Pp. 65-72.
©*IIMRD*, Mysuru
IIMRD JOURNALS
www.iimrd.com

# ವಚನ ಸಾಹಿತ್ಯದಲ್ಲಿ ಸಮಾನತೆ

***ನಾಗಮ್ಮ. ಹೆಚ್. ಭಂಗರಗಿ**

*ಕನ್ನಡ ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ.

***ಸಾರಾಂಶ:(Abstract)***

*12ನೇ ಶತಮಾನ ಒಂದು ಜನಜಾಗೃತಿ ಯುಗ ಕಾರಣ ಆಗ ತಾಂಡವವಾಡುತ್ತಿದ್ದ, ಮೂಢನಂಬಿಕೆ, ಸಂಪ್ರದಾಯಗಳಿಂದ ಕೂಡಿದ ಧರ್ಮ ಪ್ರಕ್ಷುಬ್ಧ ಪರಿಸ್ಥಿತಿಯಲ್ಲಿ, ಬಸವಾದಿ ಪ್ರಮಥರ ಒಂದು ಸಮಷ್ಠಿ ಪ್ರಕ್ರಿಯೆಯಲ್ಲಿ ಉದಯಗೊಂಡದ್ದು ಶರಣ ಧರ್ಮ.ಅಂದು ಜನರಲ್ಲಿದ್ದ ರೂಢಿ, ಸಂಪ್ರದಾಯ, ವರ್ಗ, ವರ್ಣಭೇದ, ಉಚ್ಚ–ನೀಚ, ಮೇಲು–ಕೀಳುಗಳಂಥ ಅಜ್ಞಾನದ ಅಂಧಕಾರವನ್ನು ಹೋಗಲಾಡಿಸಿ ಎಲ್ಲೋ ಇರುವ ಸ್ವರ್ಗ–ನರಕಗಳ ಪರಿಕಲ್ಪನೆಯಿಂದ ಮುಕ್ತಿಗೊಳಿಸಿ, ವಿಚಾರ ವಿವೇಕಗಳಿಂದ ಈ ಮರ್ತ್ಯದ ಮಹತ್ತನ್ನು ಅರುಹಿದರು. ಧರ್ಮ ವ್ಯಕ್ತಿಯ ಅವಿಭಾಜ್ಯ ಅಂಗ ಎಂಬುದನ್ನು ಅರಿತಿದ್ದ ಬಸವಣ್ಣನವರು, ತಮ್ಮ ಮನದಲ್ಲಿದ್ದ ಸಾಮಾಜಿಕ ಸಮತೋಲನದ ತುಡಿತಕ್ಕೆ ಧರ್ಮವನ್ನೇ ಅಡಿಪಾಯವನ್ನಾಗಿ ಮಾಡಿಕೊಂಡು, ಆ ಮೂಲಕವೇ, ಸಾಮಾಜಿಕ, ವೈಚಾರಿಕ, ಆಧ್ಯಾತ್ಮಿಕ ಚಿಂತನೆಗಳಿಂದ ಕೂಡಿದ, ವಾಸ್ತವ್ಯ ಬದುಕನ್ನು ಜನಸಾಮಾನ್ಯರಿಗೆ ಕೊಟ್ಟದ್ದು, ಶರಣ ಧರ್ಮದ ಒಂದು ವಿಶೇಷ ವೈಶಿಷ್ಟ್ಯ. ಇಂತಹ ಮಹತ್ವದ ಸಾಧನೆಗೆ ಶರಣರ ಬದುಕಿನ ಅನುಭವ ಹಾಗೂ ಆಧ್ಯಾತ್ಮಿಕತೆಯ ಅನುಭಾವದ, ವಿಚಾರ ಮಂಥನವೇ ಕಾರಣವೆಂದರೆ ತಪ್ಪಾಗಲಾರದು.*

***ಮುಖ್ಯಪದಗಳು (Keywords)*** *ಕನ್ನಡ ಸಾಹಿತ್ಯ, ವಚನ ಸಾಹಿತ್ಯ, ವಚನ ಚಳುವಳಿ, ಶಿವಶರಣರು.*

**ಪೀಠಿಕೆ**

ನುಡಿದಂತೆ ನಡೆದು, ನಡೆದಂತೆ ನುಡಿದು, ನಡೆ–ನುಡಿಯ ಸಾಮರಸ್ಯದ ಅನುಭಾವದ ಆಳದಿಂದ, ಸ್ವ ಆತ್ಮವಿಡಂಬನೆಯ ಮೂಲಕ ಸಮಾಜವನ್ನು ತಿದ್ದಿದ್ದು, ರೋಮಾಂಚನಕಾರಿಯಾದ, ಸದ್ದಿಲ್ಲದೆ ನಡೆದ ಒಂದು ಸಾಮಾಜಿಕ ಕ್ರಾಂತಿ. ಇದರಿಂದ ಹೊರಹೊಮ್ಮಿದ ಅಭಿವ್ಯಕ್ತಿಯ ಪ್ರಭೆಯೆ ವಚನಗಳು. ಇವು ಅನೇಕ ಶರಣರ ಸಿದ್ಧಾಂತಗಳನ್ನೂ, ಅವರ ಸಾಮಾಜಿಕ ಕಳಕಳಿ, ಆಧ್ಯಾತ್ಮದ ಸಿದ್ಧಿ, ಸಾಧನೆಗಳನ್ನು ಅರಿಯಲು ಸಹಾಯಕವಾಗಿವೆ. ಅನೇಕ ಮಂದಿ ವಚನಕಾರರ ಶರಣರಲ್ಲಿ ಬಸವಣ್ಣನವರ ಸಮಾನ ಮನಸ್ಕತೆಯನ್ನೇ ಕಾಣುತ್ತೇವೆ. ಅವರ ವಿಚಾರ ಧಾರೆಗಳನ್ನೇ ಹೋಲುವಂತಹ ಇತರರ ವಚನಗಳನ್ನೂ ಕಾಣುತ್ತೇವೆ. ಇದಕ್ಕೆ ಅಂದಿನ ಪರಿಸರ ಪ್ರಭಾವ ಏಕರೀತಿಯ ಭಕ್ತಿ ಪರವಶತೆ, ಆಲೋಚನೆಗಳು, ಸಮಾಜವನ್ನು ನೋಡುವ ದೃಷ್ಟಿ, ಬದುಕಿನ ಭಾವನೆಗಳಲ್ಲಿ ಸಮಾನತೆಯನ್ನು ಕಾಣಬಹುದು.

*Please cite this article as: ನಾಗಮ್ಮ ಹೆಚ್. ಭಂಗರಗಿ.* (2023). ವಚನ ಸಾಹಿತ್ಯದಲ್ಲಿ ಸಮಾನತೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 65–72.*

**ಸ್ತ್ರೀ ಸಮಾನತೆ**

ಒಂದು ಕಾಲದಲ್ಲಿ ಶೂದ್ರರಂತೆ ಧಾರ್ಮಿಕವಾಗಿ ಸಾಮಾಜಿಕವಾಗಿ ತನ್ನ ಹಕ್ಕನ್ನು ಕಳೆದುಕೊಂಡು ಮತ್ತೊಂದು ವರ್ಗ ಸ್ತ್ರೀಯರದು ಇದೆಲ್ಲ ತನ್ನ ಪೂರ್ವಜನ್ಮದ ಕರ್ಮವೆಂದು, ಆ ಪರಿಮಿತಿಯಲ್ಲಿ ತನ್ನ ಸಹಜ ಬಯಕೆಗಳನ್ನು ಬದಿಗೊತ್ತಿ ಬಾಳು ಅನಿವಾರ್ಯ ಎಂದು ಹೊಂದಿಕೊಂಡಿದ್ದವಳು. ಸ್ತ್ರೀಯರಿಗೆ ಎಲ್ಲಿ ಪೂಜ್ಯ ಸ್ಥಾನವಿದೆಯೋ ಅಲ್ಲಿ ದೇವತೆಗಳು ಕೂಡ ಆನಂದಿಸುತ್ತಾರೆ ಎಂದು ಸ್ತ್ರೀಯರನ್ನು ಕಂಡು ಗೌರವಿಸುವ ಕಾಲವೂ ಒಂದಿತ್ತು. ಆಕೆ ಪುರುಷನ ಏಳ್ಗೆಗೆ ಆತಂಕಕಾರಿ ಮಾಯೆ, ಬಲೆ ಎಂದೂ ಭಾವಿಸಿದ್ದುಂಟು. ವೇದ ಉಪನಿಷತ್. ಕಾಲದಲ್ಲಿ ಸ್ತ್ರೀಯರನ್ನು ಬ್ರಹ್ಮ ಜಿಜ್ಞಾಸೆಯಲ್ಲಿ ತೊಡಗಿದ್ದವರೂ ಅನುಭವ ಸಂಪನ್ನರೂ ಆಗಿದ್ದರು. ಸ್ಮೃತಿಗಳ ಕಾಲಕ್ಕೆ ಸ್ತ್ರೀಯರ ಜೀವನ ತೀರ ಸಂಕುಚಿತವಾದ ಚೌಕಟ್ಟಿಗೆ ಬಂಧಿತವಾಗಿತ್ತು. ಅವಳ ವೈಯಕ್ತಿಕ ವ್ಯಕ್ತಿತ್ವ ವಿಕಾಸಕ್ಕೆ ಅಲ್ಲಿ ಅವಕಾಶವೇ ಇರಲಿಲ್ಲ "ನಃ ಸ್ತ್ರೀ ಸ್ವಾತಂತ್ರ್ಯ ಮರ್ಹತೀಃ" ಎಂದು ಮನು ಮಹಾಶಯ ಘೋಷಿಸಿ ಅದಕ್ಕೆ ಶಾಸ್ತ್ರದ ಮುದ್ರೆಯನ್ನೇ ಒತ್ತಿದನು. ಹೀಗೆ ಒಂದೊಂದು ಕಾಲಕ್ಕೆ ಸ್ತ್ರೀಯರನ್ನು ಕಂಡ ಬಗೆ ವಿಭಿನ್ನವಾಗಿದೆ. ಒಟ್ಟಾರೆ ಅವಳು ಹಿಂದುಳಿದಿದ್ದೆ ಹೆಚ್ಚು.

ಇಂಥ ವಿದ್ಯಾವಂತ ಸಮಾಜದಲ್ಲಿ ನಾವು ಇಂದಿಗೂ ಸ್ತ್ರೀಯರ ಶೋಷಣೆ ದಬ್ಬಾಳಿಕೆ ಆಗುತ್ತಿರುವುದನ್ನು ಕಾಣುತ್ತಿದ್ದೇವೆ. ಹೆಣ್ಣು ಒಮ್ಮೆ ಜಾರಿದರೆ ಅವಳು ಸೂಳೆ ಎಂದು ಬಟ್ಟು ಮಾಡಿ ತೋರಿಸುತ್ತಾರೆ. ಆದರೆ ಅಂದೇ ಬಸವಾದಿ ಶರಣರು ಅವರನ್ನು ಪುಣ್ಯಸ್ತ್ರೀ ಎಂದು ಅನುಭವ ಮಂಟಪದಲ್ಲಿ ಆಶ್ರಯ ಕೊಟ್ಟಿರುವ ನಿದರ್ಶನಗಳಿವೆ.

*ಸತಿ ಪತಿಗಳಿಗೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ*
*ಪರಸ್ತ್ರೀ ಎಂಬ ಜುಬಿಗಂಜುವೆ ಪರಸ್ತ್ರೀಯರ ಬೇತಕ್ಕೆಳದ*
*ತುಡುಗುಣೆತನದಲಿ ಪರವಧುವ ನೋಡದ"*

ಇಂಥ ಪರಿಶುದ್ದವಾಣಿ ಅಂದಿನ ಶರಣರದು. ಸ್ತ್ರೀ ಎಂದರೆ ಮಾಯೆ, ಪಾಪಿ ಬೆಂಕಿ, ವಿಷ ವಿನಾಶಕ್ಕೆ ಹಾದಿ ಇತ್ಯಾದಿ ಭಾವನೆಗಳು ಇಲ್ಲಿ ಸುಟ್ಟು ಹೋತಿ ಎನ್ನ ಹೆತ್ತ ತಾಯಿ ಎಂದು ಹೇಳುವ ವಿಶಾಲ ಹೃದಯಿಗಳು ಶರಣರು ವೇದಗಳು ತಾಯಿ ದೇವರು ಎಂದು ಸಾರಿದರೆ ವಚನಕಾರರು ಅದಕ್ಕಿಂತ ಮುಂದೆ ಹೋಗಿ ಹೆಣ್ಣೇ ದೇವರು ಎಂದೂ ಸಮಾಜ ಊನ್ನತಿಯಾಗಬೇಕಾದರೆ ಅದರ ಅರ್ಧಭಾಗವಾದ ಸ್ತ್ರೀ ಸಮೂಹವನ್ನು ಹೊರಗಿಡವುದು ವಿವೇಕವಲ್ಲ ಎಂದಿ ಮೌಲ್ಯವಿತ ನುಡಿಯನ್ನು ಹೇಳಿದ್ದಾರೆ. ಇಂಥ ಸದಾವಕಾಶವನ್ನು ಬಳಸಿಕೊಂಡು ಹೆಣ್ಣು ಈ ಯುಗದಲ್ಲಿ ಪರಿಪೂರ್ಣ ವಿಕಾಸವಾಗಲು ಸಾದ್ಯವಾಯಿತು,

ಹನ್ನೆರಡನೆಯ ಶತಮಾನದ ಪೂರ್ವದಲ್ಲಿ ಸ್ತ್ರೀಯ ಸ್ಥಾನಮಾನಗಳು ತುಂಬಾ ಅಧೋಗತಿಗಿಳಿದಿದ್ದವು. ಅಂದಿನ ಕಾಲದಲ್ಲಿ ಸ್ತ್ರೀಯು ಮಾಯೆ ಮಲದ ಭಾಂಡ, ಪುರುಷರು ಬೋಗವಸ್ತು, ಹಡೆಯುವ ಯಂತ್ರ ಆಗಿದ್ದಳು. ಆದರೆ ಬಸವಾದಿ ಶರಣರು ಸ್ತ್ರೀ ಕೇವಲ ಬೋಗದ ವಸ್ತು ಅಲ್ಲ ಹೆಣ್ಣು ಮಾಯೆ ಅಲ್ಲ ಎಂದು ಸಾರಿದರು.

ಸಮಾಜದಲ್ಲಿ ಸ್ತ್ರೀಗೆ ಉಂಟಾಗಿದ್ದ ಅಸಮಾನತೆ ಶೋಷಣೆಗಳನ್ನು ಅರಿತುಕೊಂಡು ಶರಣರು ಸ್ತ್ರೀ–ಪುರುಷ ಭೇದ ರಹಿತ ಉಭಯ ಪ್ರಧಾನ ಕುಟುಂಬ ಪದ್ದತಿಯನ್ನು ಜಾರಿಗೊಳಿಸಲು ಪಣತೊಟ್ಟು ನಿಂತರು.

ಪ್ರಾಪಂಚಿಕ ಮತ್ತು ಪಾರಮಾರ್ಥಿಕ ಎರಡು ನೆಲೆಗಳಲ್ಲಿಯೂ ಅವಳಿಗೆ ಬದುಕಲು ಅನುವು ಮಾಡಿಕೊಟ್ಟಂಥ ಶ್ರೇಯಸ್ಸು ಶರಣರಿಗೆ ಸಲ್ಲುತ್ತದೆ.

ನೂರಾರು ಕುಲಗಳನ್ನು ಹೊಡೆದು ಹಾಕಿ. ಬರೀ ಹೆಣ್ಣೊಂದು ಕುಲ, ಗಂಡೊಂದು ಕುಲ ಎಂದು ಭಾವಿಸಿದ ಸಮಾಜದಲ್ಲಿಯು ಸಹ ಜೇಡರ ದಾಸಿಮಯ್ಯ ಶರಣರು.

***"ಮೊಲೆ ಮುಡಿ ಬಂದಡೆ ಹೆಣ್ಣೆಂಬರು***
***ಗಡ್ಡ ಮೀಸೆ ಬಂದಡೆ ಗಂಡೆಂಬರು***
***ವಳಗಿರುವ ಆತ್ಮ ಹೆಣ್ಣು ಅಲ್ಲ, ಗಂಡು ಅಲ್ಲ***
***ಕಾಣಾ ರಾಮನಾಥ."***

ಎಂದು ಆತ್ಮಕ್ಕೆ ಸ್ತ್ರೀ ಪುರುಷರು ಎಂಬ ಭೇದವಿಲ್ಲವೆಂದರು ವ್ಯಕ್ತಿಯ ಹುಟ್ಟನ್ನು ಪ್ರಶ್ನಿಸದೇ ಗುಣವನ್ನು ಮನ್ನಿಸುವ ವಿಚಾರ ಬಸವಾದಿ ಶರಣರದು.

ಹೆಣ್ಣು ಹೆಣ್ಣಲ್ಲ, ಹೆಣ್ಣು ರಕ್ಕಸಿಯಲ್ಲ, ಹೆಣ್ಣು ಪ್ರತ್ಯಕ್ಷ ಕಪಿಲಸಿದ್ದ ಮಲ್ಲಿಕಾರ್ಜುನ, ಎಂದು ಸಿದ್ದರಾಮ ಶಿವಯೋಗಿಗಳು ಸ್ತ್ರೀಯನ್ನು ದೈವತ್ವದ ಸ್ವರೂಪಕ್ಕೇರಿಸಿದರು. ಇದೊಂದಿಗೆ ತನ್ನ ಆತ್ಮೋಧ್ಧಾರದ ಬದುಕನ್ನು ಸಾಗಿಸಲು ಅವಳಿಗೆ ಅವಕಾಶ ಮಾಡಿಕೊಟ್ಟರು ಶರಣರು. ಬಸವಣ್ಣನವರು ಸ್ತ್ರೀ–ಪುರುಷರಿಬ್ಬರಿಗೂ ಸಮಾನವಾದ ಇಷ್ಟಲಿಂಗ ಉಪಾಸನೆ, ದರ್ಮ ಸಂಸ್ಕಾರ, ಗುರುತ್ವ– ಜಂಗಮತ್ವಗಳು ಲಭಿಸುವವೆಂದು ಸಾರಿ ಆಚರಣೆಯಲ್ಲಿ ತಂದರು. ಹೀಗಾಗಿ ಅನೇಕ ಮಹಿಳಯರು ಸಾಕ್ಷರರಾಗಿ, ಕಾಯಕ, ಮಾಡುತ್ತಾ, ದಾಸೋಹ ಸಲ್ಲಿಸುತ್ತಾ ಸ್ವಾನುಭಾವ ಪಡೆಯುವಂತಹ ಎತ್ತರಕ್ಕೆ ಏರಿದರು. ಸ್ವತ: ವಚನಗಳನ್ನು ರಚಿಸಿದಾರೆ

***"ಕಾಯಕ ನಿಂದಿತ್ತು ಹೋಗಯ್ಯಾ, ಏನ್ನಾಳ್ದನೆ***
***ಭಾವಶುದ್ದವಾಗಿ ಮಹಾಶರಣರ***
***ತಿಪ್ಪೆಯ ತಪ್ಪಲ ಅಕ್ಕಿಯ ತಂದು, ನಿಶ್ಚೈಸಿ ಮಾಡಬೇಕು***
***ಮಾರಯ್ಯ ಪ್ರೀಯ ಅಮರೇಶ್ವರ ಲಿಂಗಕ್ಕೆ ಬೇಗ ಹೋಗು ಮಾರಯ್ಯ"***

ಎಂದು ಆಯ್ದಕ್ಕಿ ಲಕ್ಕಮ್ಮ ಸಕಾಲಕ್ಕೆ ಕಾಯಕ ಮಾಡಲು ಹೋಗುವಂತೆ ಅರುಹುತ್ತಾಳೆ.

***"ಅರ್ಚನೆ ಪೂಜನೆ ನೇಮವಲ್ಲ.***
***ಮಂತ್ರ ನೇಮವಲ್ಲ,***
***ಧೂಪ ದೀಪಾರತಿ ನೇಮವಲ್ಲ,***
***ಪರಧನ ಪರಸ್ತ್ರೀ ಪರದೈವಂಗಳಿಗೆರಗದಿಪ್ಪುದೆ ನೇಮ,***
***ಶಂಭುಜಕ್ಕೇಶ್ವರನಲ್ಲಿ ಇವು ಕಾಣಿರಣ್ಣಾ ನಿತ್ಯ ನೇಮ ಎಂದು***
***ಸತ್ಯಕ್ಕಳು ನೇಮದ ಕುರಿತು ಸ್ಪಷ್ಟಪಡಿಸುತ್ತಾಳೆ***

***"ಮೊಲೆ ಮುಡಿ ಬಂದಡೆ ಹೆಣ್ಣೆಂಬರು***
***ಗಡ್ಡ ಮೀಸೆ ಬಂದಡೆ ಗಂಡೆಂಬರು***

*ಈ ಉಭಯದ ಜ್ಞಾನ*

*ಹೆಣ್ಣೋ ಗಂಡೊ ನಾಸ್ತಿನಾಥಾ?"*

ಎಂದು ಗೊಗ್ಗವ್ವೆ 'ಉಭಯದ ಜ್ಞಾನ' ಕುರಿತು ಪ್ರಶ್ನಿಸುತ್ತಾಳೆ.

**ಲಿಂಗ ಸಮಾನತೆ**

ವಚನ ಸಂಸ್ಕೃತಿಯು ಅತ್ಯಂತ ಸ್ಪಷ್ಟವಾಗಿ ಹೆಣ್ಣಿನ ಆಧೀನ ಸ್ಮಿತಿಯನ್ನು ಬದಲಾಯಿಸಲು ಪ್ರಯತ್ನಿಸಿತು ಗಂಡು ಹೆಣ್ಣಿನ ಸಂಬಂಧದ ಬಗ್ಗೆ ವಿಶ್ಶಿಷ್ಟವಾದ ದೃಷ್ಟಿ ಕೋನವೋಂದು ಅಲ್ಲಿ ರೂಪು ತಳೆಯಿತ್ತು ಗಂಡು ಹೆಣ್ಣಿನ ಸಂಭದದ ಬಗ್ಗೆ ಹೊಸದೊಂದು ಮೀಮಾಂಸೆಯನ್ನು ವಚನ ಸಂಸ್ಕ್ರುತಿ ಮಂಡಿಸಿತು ಈ ಚರ್ಚೆಯನ್ನು ನಾವು ದೇವರ ದಾಸಿಮಯನ ಪ್ರಸಿದ್ದ ವಚನದಿಂದಲೇ ಪ್ರಾರಂಬಿಸಬಹುದು.

*ಮೊಲೆ ಮುಡಿ ಬಂದರೆ ಹೆಣ್ಣೆಂಬರು*

*ಗಡ್ಡ ಮೀಸೆ ಬಂದರೆ ಗಂಡೆಂಬರು ನಡುವೆ ಸುಳಿವಾತ್ಮ*

*ಗಂಡು ಅಲ್ಲ ಹೆಣ್ಣು ಅಲ್ಲ ಕಾಣಾ ರಾಮನಾಥ*

**ಲಿಂಗ ಸಮಾನತೆಯನ್ನು ಪ್ರತಿಪಾದಿಸುವ ಗೊಗ್ಗವ್ವನ ಇನ್ನೊಂದು ವಚನ ಗಮನಿಸುವಂತಹದಾಗಿದೆ.**

*ಗಂಡು ಮೋಹಿಸಿ ಹೆಣ್ಣು ಹಿಡಿದಡೆ*

*ಅದು ಒಬ್ಬರ ವಡವೆ ಎಂದು ಅರಿಯಬೇಕು*

'ಹುಟ್ಟು' ಕಾರಣವಾಗಿ ಬೇರೆ ಬೇರೆಯಾಗಿ ತೋರುವ; ಆದರೆ ಹಸಿವು, ತೃಷೆ, ನಿದ್ರೆ, ಭಯ, ಮೈಥುನಾದಿ ಜೀವನಾವಶ್ಯಕ ಸಂಗತಿಗಳಲ್ಲಿ ಸಮಾನಾಸಕ್ತವಾಗಿರುವ ಜೀವಿಗಳು ಹೆಣ್ಣು ಮತ್ತು ಗಂಡು. ಲಿಂಗ ಭೇದದಿಂದ 'ಸೃಜನ' ಪ್ರಕ್ರಿಯೆಗೆ ಭಿನ್ನ ಸ್ವರೂಪದಲ್ಲಿ ಪರಸ್ಪರ ಆಕರ್ಷಿತವಾಗುವ ಈ ಘಟಕಗಳು; ಮೂಲತಃ ಒಂದೇ ಎಂಬ ಅಂಶವನ್ನು ಕುರಿತು ಈಗಾಗಲೇ 'ಸತಿ–ಪತಿ ಭಾವ'ಕ್ಕೆ ಸಂಬಂಧಿಸಿದೆ, ಹೊರಗಿನ ರೂಪ ಬೇರೆ ಬೇರೆಯಾಗಿ ತೋರಿದರೂ, ಒಳಗಿನ ಅಂಶ ಮಾತ್ರ ಒಂದೇ ಎಂಬ ಶಿವಶರಣರ ನಂಬುಗೆಯು ತುಂಬಾ ಆಧುನಿಕವಾಗಿದೆ. ಬುದ್ಧಿ, ಭಾವ, ಅನುಭೂತಿಗಳಲ್ಲಿ ಉಭಯತರ ಸ್ಪಂದನದಲ್ಲಿ ಅಂಥ ವ್ಯತ್ಯಾಸವೇನೂ ತೋರುವುದಿಲ್ಲ. ಜೈವಿಕವಾಗಿಯಾದರೂ ವೈದ್ಯಕೀಯ ಕಾರಣಕ್ಕೆ ರಕ್ತ, ನೇತ್ರ, ಮೂತ್ರಕೋಶಾದಿ ಅಂಗಾಂಗಗಳನ್ನು ಹೆಣ್ಣು–ಗಂಡುಗಳಿಗೆ ಪರಸ್ಪರ ವಿನಿಮಯ ಮಾಡಬಹುದಾಗಿದೆ. "ಒಳಗೆ ಸುಳಿವಾತ್ಮ ಹೆಣ್ಣೂ ಅಲ್ಲ. ಗಂಡೂ ಅಲ್ಲ".ಎಂಬ ಶಿವಶರಣರ ಮಾತು ಕೆಲವು ಹೊರಗೆ ಕಾಣುವ ಅವಯವಗಳಿಗೂ ಸರಿಯಾಗಿ ಹೊಂದುವುದು ಗಮನಾರ್ಹವಾಗಿದೆ. 'ಲಿಂಗಾಂಗ ಸಾಮರಸ್ಯ'ದ ಪರಿಕಲ್ಪನೆಯಲ್ಲಿ ಸಾಧಕ ಜೀವಿ ತನ್ನನ್ನು 'ಸತಿ' ಎಂದು ಕರೆದುಕೊಳ್ಳುವುದು; ಲಿಂಗ (ಇಷ್ಟ ದೈವ) ವನ್ನು ಪತಿ ಎಂದು ಪರಿಭಾವಿಸುವುದು ಮತ್ತು ಗುರು, ಜಂಗಮಾದಿ ಅವಸ್ಥೆಗಳಲ್ಲಿ ಯಾವುದೇ ರೀತಿಯ ಭೇದ ಅಥವಾ ವ್ಯತ್ಯಾಸವನ್ನು ಕಾಣದೆ ಇರುವುದು ತುಂಬ ಪ್ರಮುಖವಾಗಿದೆ. ಭಕ್ತಿ ಮಾಡುವುದರಲ್ಲಿ; ಶಿವಯೋಗ ಸಾಧಿಸುವುದರಲ್ಲಿ ಸ್ತ್ರೀ–ಪುರುಷ ಯಾರೇ ಆಗಲಿ ಹೆಚ್ಚು–ಕಡಿಮೆಯವರಲ್ಲ. ಅನುಭಾವಿಕ ವಲಯದೊಳಗೆ ಎಲ್ಲ 'ಮಾನವ ಜೀವಿ'ಯೂ ಸಮಾನ 'ಹಂತ'ವನ್ನು ಹೊಂದಬಹುದಾಗಿದೆ.ಇಲ್ಲಿ ಯಾವುದೇ ವರ್ಣ, ವರ್ಗಾದಿ ತಾರತಮ್ಯಕ್ಕೆ ಆಸ್ಪದವಿರುವುದಿಲ್ಲ. ಲಿಂಗ ಭೇದವಂತೂ ಬರುವುದೇ ಇಲ್ಲ ನೋಟವೊಂದಕ್ಕೆ ಎರಡು ಕಣ್ಣುಗಳಿದ್ದಂತೆ; ಪೂರ್ಣ ಪ್ರಮಾಣದ 'ಮನುಷ್ಯತ್ವ'ಕ್ಕೆ ಪರಸ್ಪರ ಪೂರಕ ಘಟಕಗಳಾದ ಹೆಣ್ಣು–

ಗಂಡುಗಳಿವೆ. ಇವು ಸಂಸಾರವೆಂಬ ರಥದ ಉಭಯ ಗಾಲಿಗಳಿದ್ದಂತೆ ಎಂಬ ನಿಲುವು ಶಿವಶರಣದಾಗಿದೆ. ಇದೆಲ್ಲವನ್ನೂ ಏಕ ಕಾಲಕ್ಕೆ ಅದ್ಭುತವಾಗಿ ಧ್ವನಿಸುವಂತೆ; **"ಹೆಣ್ಣುಮಯ್ಯ"** (ಅರ್ಧನಾರೀಶ್ವರ) ಎಂಬ ಪರಿಕಲ್ಪನೆಯು ಶಿವಶರಣರಲ್ಲಿ ಉದ್ಭವಗೊಂಡಂತೆ ತೋರುತ್ತದೆ.ಈ ಸಮಾಜದಲ್ಲಿ ಹೆಣ್ಣಿನ ಸ್ಥಿತಿಯು ಇನ್ನೂ ಚಿಂತಾಜನಕವಾಯಿತು.ಇಂಥ ಅಮಾನವೀಯವಾದ ಭೇದವು ಕಾಲಾನುಕಾಲದಿಂದ ಆರಂಭಗೊಂಡು, ಇಂದಿನವರೆಗೂ ಅನುಚಾನವಾಗಿ ಮುಂದುವರಿದುಕೊಂಡೇ ನಡೆದಿರುವುದು ಕಂಡುಬರುತ್ತದೆ.

**ಸಾಮಾಜಿಕ ಸಮಾನತೆ**

ವಚನಗಳ ಕಾಲದ ಸಾಮಾಜಿಕ ವ್ಯವಸ್ಥೆಯಲ್ಲಿ ಜಾತಿಗಳು, ಸ್ತ್ರೀಯರ ಸ್ಥಾನ, ಸಂಸ್ಕಾರಗಳು, ಗುಲಾಮ ಪದ್ಧತಿ, ಅಂಧಶ್ರದ್ದೆಗಳು ಮತ್ತು ವಚನಕಾರರ ಆದರ್ಶ ಸಮಾಜದ ಕಲ್ಪನೆಗಳ ಬಗ್ಗೆ ಇಲ್ಲಿ ಚರ್ಚೆ ಮಾಡಲಾಗಿದೆ. ನಮ್ಮ ಸಮಾಜ ವ್ಯವಸ್ಥೆಯ ಬಹುಮುಖ್ಯ ಅಂಶವಾದ ಜಾತಿಗಳ ಬಗ್ಗೆ ನಮ್ಮ ಚರ್ಚೆಯು ಸ್ವಲ್ಪ ವಿಸ್ತಾರವಾಗಿಯೇ ಇರುವುದನ್ನು ಗಮನಿಸಬಹುದು. ವರ್ಣಗಳು ಸಮಾಜವನ್ನು ವಿಂಗಡಿಸಿದ್ದರೂ ಮೊದಮೊದಲು ನಾನಾವರ್ಣಗಳು ಪರಸ್ಪರ ಬೆರೆಯುವುದನ್ನು ನಿರ್ಬಂಧಪಡಿಸಿರಲಿಲ್ಲ. ಮೊದಲಿದ್ದ ವ್ಯವಸ್ಥೆಗಿಂತ ತುಂಬ ಕಟ್ಟುನಿಟ್ಟಾದ ವ್ಯವಸ್ಥೆಯುಂಟಾಗಲು ಕಾರಣಗಳು ಪ್ರಾಯಶಃ ತಮ್ಮ ಗುಂಪಿನ ವೈಶಿಷ್ಟ್ಯವನ್ನು ಕಾಪಾಡಿಕೊಳ್ಳುವ ಆಸೆ, ವಂಶಪಾರಂಪರ್ಯವಾದ ತಮ್ಮ ವಿಶಿಷ್ಟ ವೃತ್ತಿಗಳನ್ನು ಇತರರು ಅನುಸರಿಸದಿರಲೆಂಬ ಆರ್ಥಿಕ ಆಸಕ್ತಿ. ಇತರ ಧರ್ಮಗಳು ಉಂಟು ಮಾಡಿದ ಪ್ರಭಾವ–ಇವುಗಳು. ಬುದ್ಧ ಪೂರ್ವಯುಗದಲ್ಲಿ ಆಹಾರದ ವಿಷಯದಲ್ಲಾಗಲೀ ವಿವಾಹದ ವಿಷಯದಲ್ಲಾಗಲೀ ನಿರ್ಬಂಧವೇ ಇಲ್ಲದಿದ್ದುದು ಬೌದ್ಧಧರ್ಮವು ತಲೆದೋರಿದ ನಂತರ ಬದಲಾಯಿಸಿತು. ಬೌದ್ಧರು ಕೀಳೆಂದು ಪರಿಗಣಿಸಿದ ಮಾಂಸ ಸೇವನೆ ಮತ್ತು ಬಹುಪತ್ನಿತ್ವವನ್ನು ತೊರೆದು ಬ್ರಾಹ್ಮಣರು ತಮ್ಮ ವೈಶಿಷ್ಟ್ಯವನ್ನುಳಿಸಿಕೊಳ್ಳಲು ಪ್ರಯತ್ನಿಸಿದರು. ಯಾವಾಗ ವೈಶಿಷ್ಟ್ಯ ರಕ್ಷಣೆಯೆ ಮುಖ್ಯ ಉದ್ದೇಶವಾಯಿತೋ ಆಗ ಕೋಳು–ಕೊಡುಗೆಗಳು ಇಲ್ಲವಾದವು: ಕೊಳು–ಕೊಡುಗೆಗಳು ನಿಂತಾಗ ಬೇರೆ ಬೇರೆ ವರ್ಗಗಳಿಗೆ ಸೇರಿದ ಜನರು ಪರಸ್ಪರದಿಂದ ದೂರವಾದರು; ಅವರಲ್ಲಿ ಮೇಲು–ಕೀಳು ಭಾವನೆಯು ಮೊಳೆಯಲಾರಂಭಿಸಿತು. ಇದು ಜಾತಿಗಳುಂಟಾಗುವುದಕ್ಕೆ ತಳಹದಿಯಾಯಿತು. ಈ ತರ–ತಮ್ಯ ಭಾವನೆಯು ಬಲಿತ್ಯಾಗ ಪರಿಸ್ಥಿತಿಯು ಎಂತಹ ಮಟ್ಟವನ್ನು ಮುಟ್ಟಿತೆಂದರೆ ಕೀಳುಜಾತಿಯವರಿಗೆ ಯಜ್ಞಯಾಗಾದಿಗಳಲ್ಲಿ ಪಾಲ್ಗೊಳ್ಳುವ ಹಕ್ಕು ಹೋಯಿತು. ಉಪನಯನ–ವಿದ್ಯಾಭ್ಯಾಸಗಳಿಗೆ ಅವರು ಹೊರತಾದರು. ಆಡಳಿತ ವ್ಯವಸ್ಥೆಯಲ್ಲಿ ಅವರಿಗೆ ಉನ್ನತ ಹುದ್ದೆಗಳು ದೊರಕದಾದವು; ಅವರ ಪಾಲಿಗೆ ಉಳಿದದ್ದೆಂದರೆ ಮೇಲಿನ ಜಾತಿಯವರನ್ನು ಸೇವೆ ಮಾಡುವ ಸೌಭಾಗ್ಯ ಮಾತ್ರ.ಇದು ಇಲ್ಲಿಗೇ ನಿಲ್ಲಲಿಲ್ಲ. ಪುರಾಣಗಳು ಹಾಗೂ ಧರ್ಮಸೂತ್ರಗಳ ಕಾಲಕ್ಕಾಗಲೀ ಶೂದ್ರನೊಬ್ಬನು ಅಪರಾಧವೊಂದನ್ನೆಸಗಿದರೆ ಮೇಲಿನ ವರ್ಣದವನೊಬ್ಬನು ಅದೇ ಅಪರಾದವನ್ನು ಮಾಡಿದ್ದರೆ ಯಾವ ಶಿಕ್ಷೆಯನ್ನನುಭವಿಸಬೇಕಾಗಿತ್ತೋ, ಅದಕ್ಕಿಂತ ಕಠಿಣವಾದ ಶಿಕ್ಷೆಯನ್ನು ಅನುಭವಿಸಬೇಕಾದಂತಹ ಪರಿಸ್ಥಿತಿಯಿದ್ದಿತು. ಈ ಪದ್ಧತಿಯು ಇತ್ತೀಚಿನವರೆಗೂ ಮುಂದುವರೆದುಕೊಂಡು ಬಂದಿತ್ತು. ವರ್ಣಗಳು ಕರ್ಮಾನುಗುಣವಾಗಿ ನಿರ್ಮಿತವಾದುದೆಂದು ಹೇಳಿದರೂ, ಹುಟ್ಟಿನ ಮೇಲೆ ಮಾತ್ರ ಪರಿಗಣಿತವಾಗುವುದರಲ್ಲಿ ಅದು ಕೊನೆಗೊಂಡಿತು.

**ಜಾತಿ ಸಮಾನತೆ**

ಜಾತೆ ವಿನಾಶ ಹಾಗೂ ಹೆಣ್ಣಿನ ಬಿಡುಗಡೆಗೆಳೆರಡೂ ಅಭಿನ್ನವಾಗಿದ್ದವು ಎಂಬುದನ್ನು ನಾವು ಗುರುತಿಸಬೇಕಾಗಿದೆ. ಈ ದೃಷ್ಟಿಯಿಂದ ಬಸವಣ್ಣನ ಈ ವಚನವು ತುಂಬಾ ಮುಖ್ಯವಾದುದಾಗಿದೆ.

***ಆವಕುಲವಾದಡೇನು?***
***ಶಿವಲಿಂಗವಿದ್ದವನೆ ಕುಲಜನು***
***ಕುಲವನರಸುವರೆ ಶರಣನಲ್ಲಿ, ಜಾತಿ ಸಂಕರವಾದ ಬಳಿಕ?***
***ಶಿವಧರ್ಮ ಕುಲೇಜಾತಃ ಪುನರ್ಜನ್ಮ ವಿವರ್ಜತಃ***
***ಉಮಾ ಮಾತಾ ಪಿತಾರುದ್ರ ಐಶ್ವರಂ ಕುಲಮೇ ವಚನ?***
***ಎಂಬುದಾಗಿ***
***ವಕ್ಕುದ ಕೊಂಬೆನವರಲ್ಲಿ, ಕೂಸಕೊಡುವೆ***
***ಕೂಡಲಸಂಗವದೇವ ನಂಬವೆ ನಿಮ್ಮ ಶರಣರು***

ಜಾತಿ ಪದ್ದತಿಯು ಭಾರತ ದೇಶಕ್ಕಂಟಿದ ಅನಿಷ್ಟವಾಗಿದೆ. 'ಸರ್ವೇಜನಾ ಸುಖಿನೋ ಭವಂತು' ಮತ್ತು 'ವಸುದೈವ ಕುಟುಂಬಕಂ' ಎಂಬ ಮಾತುಗಳೆಲ್ಲ ಪ್ರಚಲಿತದಲ್ಲಿದ್ದರೂ, ಅವು ನಮ್ಮ ಸಾಮಾಜಿಕ ಜನಜೀವನದಲ್ಲಿ ಜಾರಿಗೆ ಬಾರದೇ ಹೋದವು. "ಮೇಲ್ಜಾತಿಯವರು ಯಾವುದೇ ಕೆಟ್ಟ ಕೆಲಸ ಮಾಡಿದರೂ ಕೀಳರೆನಿಸುವುದಿಲ್ಲ. ಕೆಳಜಾತಿಯವರು ಏನೇ ಒಳ್ಳೆಯ ಕೆಲಸ ಮಾಡಿದರೂ ಉಚ್ಚರೆನಿಸುವುದಿಲ್ಲ" ವೆಂಬ ಮಾತೆ ಇಲ್ಲಿ ಮೇಲುಗೈ ಸಾಧಿಸಿ ಬಿಟ್ಟಿತು. ತತ್ವಪರಿಣಾಮವಾಗಿ ನೂರಕ್ಕೆ 90ರಷ್ಟು ಜನರ ಜೀವನ ನರಕ ಸದೃಶವಾಯಿತು. ಅಸ್ಪೃಶ್ಯತೆಯಂಥ ಭೀಕರ ಆಚರಣೆ ಸರ್ವತ್ರ ಹರಡಿತು. ಮುಂದೆ ಅಸ್ಪೃಶ್ಯರಷ್ಟೇ ಅಲ್ಲ; ಅಸಾಮಿಪ್ಯರು, ಅಸದೃಶ್ಯರನ್ನು ಸೃಷ್ಟಿಸಲಾಯಿತು. ಅಸಮಾನತೆಯ ಗಡಿ ಭೂಮಿ ಆಕಾಶದಷ್ಟು ವ್ಯಾಪಕವಾಯಿತು. ಹೀಗೆ ಸಾಮಾಜಿಕ ವಿಷಮತೆಯು ಅಟ್ಟಹಾಸಗೈಯ್ಯುತ್ತಿರುವಾಗ ಬಸವಾದಿ ಶಿವಶರಣರು ಕ್ರಾಂತಿಯ ದೀವಿಗೆಯನ್ನು ತಮ್ಮ ಸಾಹಿತ್ಯ ಕೃತಿಗಳ ಮೂಲಕ ಹೊತ್ತಿಸಲು ಯತ್ನಿಸಿರುವುದು ಅನುಪಮವಾಗಿದೆ.

ವಚನಗಳಲ್ಲಿ ಪ್ರಕಟವಾದ 'ಜಾತಿ ಪದ್ಧತಿಯ ಕುರಿತ ವಿಚಾರಗಳನ್ನು ಈಗ ಪ್ರಸ್ಥಾಪಿಸಬಹುದು. ವಚನಕಾರರು "ಜಾತಿಯು ಜನನದಿಂದ ಬರುವುದಿಲ್ಲ ನೀತಿಯಿಂದ ನಿರ್ಧಾರವಾಗುತ್ತದೆ". "ಮನುಷ್ಯನ ನಡೆ–ನುಡಿ ಶುದ್ಧವಾದರೆ; ಆತನ ಕುಲವೂ ಸತ್ಕುಲವೆನಿಸುತ್ತದೆ" ಎಂದು ತಮ್ಮ ಅನೇಕ ಕೃತಿಗಳಲ್ಲಿ ಅವರು ಸ್ಪಷ್ಟವಾಗಿ ಪ್ರತಿಪಾದಿಸಿದ್ದಾರೆ. ಚೆನ್ನಬಸವಣ್ಣನವರು ನಿಜವಾದ ಜಾತಿ; ಅದರಲ್ಲೂ ಉತ್ತಮ ಜಾತಿ ಯಾವುದೆಂದು ಒಂದು ವಚನದಲ್ಲಿ ಹೀಗೆ ಹೇಳುತ್ತಾರೆ. "ಜಾತಿವಿಡಿದು ನೆನೆವೆ ನಮ್ಮ ನೀತಿಯುಳ್ಳ ಶರಣರ ಆಚಾರವಿಲ್ಲದವರು ಕೀಳು ಜಾತಿಯು ಇವೆಲ್ಲವೂ ಹೃದಯಪೂರ್ಣ ಸ್ಪಂದಿಸುವಿಕೆಯ ಪರಿಣಾಮಗಳು. ಭಾವ ಸಹಜ ಸಂಬಂಧಗಳ ಪ್ರಕ್ರಿಯೆಗಳು. ಯಾರು–ಯಾರನ್ನು ಮುಟ್ಟದೇ ಇರುವ ಸಮಾಜದಲ್ಲಿ ನೆಮ್ಮದಿ ನೆಲೆಗಾಣಲಾರದು. ಈ ಸತ್ಯವನ್ನು ಮನಗಂಡ ಶಿವಶರಣರು ತಮ್ಮ ವಚನಗಳಲ್ಲಿ ಅದನ್ನು ಸಾದರ ಪಡಿಸಿದ್ದಾರೆ. "ಜಾತಿ ಭೇದವಿಲ್ಲ ತನಗೆ ಪ್ರೀತಿಯೆಂಬುದಿಲ್ಲ ಅಪ್ರೀತಿಯೆಂಬುದಿಲ್ಲ ದಿರ್ಪ ಜಾತ ಸತ್ಯ

ಶರಣನು". ಜಗತ್ತನ್ನೇ ಪ್ರೀತಿಸುವುದರ ಮೂಲಕ ತನ್ನನ್ನು ತಾನು ಪ್ರೀತಿಸಿಕೊಳ್ಳುವ ಈ ಪರಿಯು ಪವಾಡ ಸದೃಶ್ಯವಾಗಿದೆ. ಉತ್ತಮ ಕುಲವೆಂದು ಅಹಂಕಾರ ಪಡುವವರಿಗೆ 'ಕುಲಮದ', 'ಛಲಮದ'ಗಳ ಟೊಳ್ಳುತನವನ್ನು ಸ್ಪಷ್ಟವಾಗಿ ವಿವರಿಸುತ್ತಾರೆ. ಇದರಿಂದ ಮೇಲು ಜಾತಿಯವರಲ್ಲಿ ಅನಗತ್ಯವಾಗಿ ಬೆಳೆದು ನಿಂತಿದ್ದ 'ಅಹಂಭಾವ'ದ ಭ್ರಮೆಯು ನಿರಸಗೊಳ್ಳುತ್ತದೆ. ಈ ಜಾತಿಯೆಂಬ ಪಾರ್ಶ್ವವಾಯುವಿನಿಂದ ಸಾಮಾಜಿಕ ಸ್ವಾಸ್ಥ್ಯವು ಕುರುಡಾದಾಗ ಜೀವಂತಿಕೆಯೆಂಬ ಪ್ರಗತಿಪರತೆಯು ಸಾಧ್ಯವಾಗದೇ ಹೋಗುತ್ತದೆ. ಅದಕ್ಕಾಗಿಯೇ: "ದೇಶನಾಮ ಜಾತಿ ರೂಪ ಸೀಮಾಚಾರ ವಿದ್ಯಾ ವೇಷವನು ಕಂಡು ಬೆಸಗೊಳ್ಳದೆ ಶರಣೆನುತವೆ". "ಜಾತಿಯ ನೀತಿಯ ಬಳಸದ ಸಮ್ಮುಖ ಪ್ರೀತಿಯ ಮೂಢನು" ಎಂದೂ, "ತಲೆಯೊಳಗೆ ನಾಲಗೆ ಹಡೆಯುವ" ಪರಿಯು ಜ್ಞಾನಕ್ಕಿರುವ 'ಕೊಂಬೇ' ವಿನಾ ತನ್ನ ತನವನ್ನು ಬಿಚ್ಚಿ ತನ್ನೊಳಗೆಳೆದುಕೊಳ್ಳುವ ಮಾನವ ಸಂಪರ್ಕ ಸಾಧ್ಯತೆಯ ರೀತಿಯಾಗುವುದಿಲ್ಲವೆಂದು ಅವರು ವಿಡಂಬಿಸುತ್ತಾರೆ.

ಹನ್ನೆರಡನೆಯ ಶತಮಾನದಲ್ಲಿ ಬಸವಾದಿ ಶಿವಶರಣರು ನಡೆಸಿದ ಆಂದೋಲನವು ಕರ್ನಾಟಕದಲ್ಲಿ ಮಾತ್ರವಲ್ಲ, ಇಡೀ ಭಾರತದಲ್ಲಿಯೇ ಅಭೂತಪೂರ್ವವಾದದ್ದು. ವಚನ ಸಾಹಿತ್ಯ ಸಂಸ್ಕೃತಿಯು ಅಳವಡಿಸಿಕೊಂಡ ಬಹುಮುಖ್ಯ ಮೌಲ್ಯವೆಂದರೆ ಸಮಾನತೆ, ಮೂಲಭೂತವಾಗಿ ಎಲ್ಲ ಸಮಾನವೆಂದು ಪರಿಗಣಿಸುವುದು ಹಾಗೂ "ಸಕಲ ಜೀವಾತ್ಮರಿಗೆ ಲೇಸನ್ನೆ" ಬಯಸುವುದು, ವೈದಿಕ, ಜೈನ, ಬೌದ್ಧ ಮುಂತಾದ ಆಗಿನ ವ್ಯಾಪಕವಾಗಿದ್ದ ಮತಗಳಲ್ಲಿನ ಅವಕಾಶದ ಅಸಮಾನತೆಯನ್ನು ಅಲಗೆಳೆದು ಶರಣರು ಸಮಾನಾವಕಾಶದ ಭೂಮಿಕೆಯನ್ನೊದಗಿಸಿದರು. ಎಲ್ಲ ಮನುಷ್ಯರ ಸಹಜ–ವ್ಯಾಪಾರಗಳ ಸಮಾನತೆಯನ್ನು ಬಸವಣ್ಣ ಎತ್ತಿ ತೋರಿಸುತ್ತಿದ್ದಾನೆ; ವರ್ಣ–ಜಾತಿ–ಲಿಂಗಗಳ ನಡುವಣ ವ್ಯತ್ಯಾಸ ಕೃತಕವಾದುದೆಂದು ಸೂಚಿಸುತ್ತಿದ್ದಾನೆ. ಗಂಡು–ಹೆಣ್ಣುಗಳ ನಡುವಣ ವ್ಯತ್ಯಾಸವು ಕೇವಲ ಜೈವಿಕವಾದದ್ದೇ ಹೊರತು ಸತ್ವತಃ ಅಲ್ಲ ಎಂಬುದನ್ನು ಜೇಡರ ದಾಸಿಮಯ್ಯ ತನ್ನ ಮಾತಿನಲ್ಲಿ ವ್ಯಕ್ತಪಡಿಸಿದ್ದಾನೆ. ಅದು ಅನೇಕ ವಚನಕಾರರಲ್ಲಿ ಅನುರಣನಗೊಂಡಿತು. ಶಿವಶರಣರು ಈ ಸಮಾನತೆಯ ಪರಿಕಲ್ಪನೆಯನ್ನು ಅನುಷ್ಠಾನಕ್ಕೆ ತರುವಲ್ಲಿ ಖಚಿತ ಮಾರ್ಗವನ್ನು ಅನುಸರಿಸಿದ್ದಾರೆ. ಸಮಾನತೆ ಎಂಬುದು ಸಾಮಾಜಿಕ ಸಂದರ್ಭದಲ್ಲಿನ ಸ್ಥಿತಿಯಾದ್ದರಿಂದ ಸಮಾಜ–ವ್ಯಕ್ತಿಗಳ ನಡುವಣ ಸಂಬಂಧವನ್ನು ಅವರು ಖಚಿತಪಡಿಸಿಕೊಂಡರು. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ ವ್ಯಕ್ತಿಯು ಪಡೆಯುವ ಸಮಾನಾವಕಾಶವು ಸಾಮಾಜಿಕ ಸಂದರ್ಭದಲ್ಲಿಯೇ ವ್ಯಕ್ತವಾಗಬೇಕಾದುದರಿಂದ ವ್ಯಕ್ತಿ ಸಮಾಜದ ಒಂದು ಭಾಗವಾಗಿ ನಿರ್ವಹಿಸುವ ಪಾತ್ರ ಹಾಗೂ ಸಮಾಜ ವ್ಯಕ್ತಿಗೆ ಒದಗಿಸುವ ಸುಭದ್ರತೆ–ಇವುಗಳ ಬಗ್ಗೆ ಶರಣರಿಗೆ ಖಚಿತವಾದ ಕಲ್ಪನೆಯಿದ್ದಂತೆ ತೋರುತ್ತದೆ. ವ್ಯಕ್ತಿ–ಸಮಾಜಗಳ ನಡುವಣ ಸಂಬಂಧದ ಗಟ್ಟಿತನಕ್ಕಾಗಿ ಹಾಗೂ ಅವುಗಳ ಪೂರಕ ಸಂಬಂಧಕ್ಕಾಗಿ ಶರಣರು ನೀಡಿದ ಸಾಮಾಜಿಕ ನಡಾವಳಿಯೆಂದರೆ 'ಪಂಚಾಚಾರ'ಗಳು. ಲಿಂಗಾಚಾರ, ಸದಾಚಾರ; ಶಿವಾಚಾರ, ಗಣಾಚಾರ ಮತ್ತು ಭೃತ್ಯಾಚಾರಗಳು ವ್ಯಕ್ತಿಯು ಸಮಾಜವನ್ನು ಪರಿಭಾವಿಸಬೇಕಾದ ರೀತಿ, ಸಮಾಜವು ವ್ಯಕ್ತಿಯನ್ನು ಒಳಗೊಳ್ಳಬೇಕಾದ ಬಗೆ, ಇವುಗಳನ್ನು ಮತೀಯ ಚೌಕಟ್ಟಿನಲ್ಲಿ ವಿಧಿಸುತ್ತವೆ. ನಂಬಿಕೆಯ ಸಮಾನಮನಸ್ಕತೆ, ಕಾಯಕದಿಂದ ಜೀವನ, ತನ್ನ ಸಮುದಾಯದ ಇತರರನ್ನೆಲ್ಲ ಸಮಾನರೆಂದು

ಕಾಣಬೇಕಾದ ದೃಷ್ಟಿ, ನಂಬಿಕೆಯ ಆಳ ಹಾಗೂ ನಡವಳಿಕೆಯ ವಿನಯಗಳು. ಈ ಮತೀಯ ವಲಯಕ್ಕೆ ಬಂದವರನ್ನು ಒಂದುಗೂಡಿಸುವ ಹಾಗೂ ಸಮಾನ ಘಟಕಗಳನ್ನಾಗಿ ಪರಿಭಾವಿಸುವ ಗುರಿಯನ್ನು ಪಡೆದಿವೆ.

ಸಮಾನತೆಯ ಪರಿಕಲ್ಪನೆಯು ಚಳುವಳಿ ನಡೆದ ರೀತಿಯಲ್ಲಿಯೇ ಹೇಗೆ ಅನುಷ್ಠಾನಕ್ಕೆ ಬಂದಿತೆಂಬುದನ್ನು ನೋಡೋಣ.ಶರಣ ಚಳುವಳಿಯ ನಾಯಕನಾರು? ಬಸವಣ್ಣ ಎಂದು ತಕ್ಷಣ ನಾವು ಹೇಳಬಹುದಾದರೂ ಅವನೇ "ಎನಗಿಂತ ಕಿರಿಯರಿಲ್ಲ ಶಿವಶರಣರಿಗಿಂತ ಹಿರಿಯರಿಲ್ಲ" ಎಂದು ವಿನಯವನ್ನು ವ್ಯಕ್ತಪಡಿಸುತ್ತಾನೆ. ಅಲ್ಲದೆ ಚಳುವಳಿಯಲ್ಲಿ ಬಸವಣ್ಣ ವಹಿಸಿದ ಪಾತ್ರ ಸಂಘಟನೆಯದಾಗಿತ್ತೇ ಹೊರತು ಮಿಕ್ಕ ವಿಷಯದಲ್ಲಿ ಅವನಂತೆ ಇತರರೂ ಮುಖ್ಯರಾಗುತ್ತಾರೆ. ಹಾಗೆ ನೋಡಿದರೆ, 'ಶೂನ್ಯಸಂಪಾದನೆ' 'ಪ್ರಭುಲಿಂಗ ಲೀಲೆಗಳು ಅಲ್ಲಮನನ್ನು ಕೇಂದ್ರ ವ್ಯಕ್ತಿಯಾಗಿ ಚಿತ್ರಿಸುತ್ತದೆ. ಆದರೆ ಶೂನ್ಯ ಸಂಪಾದನೆಯಲ್ಲಿ ಕೂಡ ಅಲ್ಲಮನನ್ನು ಮುಕ್ತಾಯಕ್ಕನಂತಹವರು ಪ್ರಶ್ನಿಸುತ್ತಾರೆ. ಜೊತೆಗೆ, ಶೂನ್ಯ ಸಂಪಾದನೆಯಲ್ಲಿ ಪ್ರತಿಪಾದಿತವಾಗುವ ತತ್ವಗಳು ಅಲ್ಲಮನ ಉಪದೇಶ ರೂಪದಲ್ಲಿ ವ್ಯಕ್ತವಾಗುವಂತಹುವಾಗಿರದೆ, ಅಲ್ಲಮ ವಿವಿಧ ಶರಣರೊಡನೆ ನಡೆಸಿದ ಚರ್ಚೆಯ ಫಲರೂಪದಲ್ಲಿ ಮಂಡಿತವಾಗುತ್ತವೆ.

ಸಮಾನತೆಯ ಮೂಲದಿಂದ ಹೊರಟ ಶರಣರ ಸಮಾಜ ಸಂಘಟನೆಯ ಇನ್ನೊಂದು ಮುಖವೆಂದರೆ ಸಮಾಜ ಶಿಸ್ತಿನ ಪರಿಧಿಯಲ್ಲಿ ವ್ಯಕ್ತಿಯು ಹೊಂದಿರಬೇಕಾದ ಸ್ವಾತಂತ್ರ್ಯ. ಶರಣರ ಪರಿಕಲ್ಪನೆಗಳಲ್ಲಿ ಈ ವ್ಯಕ್ತಿವಿಶಿಷ್ಟತೆ ಹೇಗೆ ಕಾಣುತ್ತದೆ ಎಂಬುದನ್ನೀಗ ನೋಡೋಣ. ಹಿಂದಿನ ಆಚರಣೆಯಾದ ದೇವಸ್ಥಾನ ನಿರ್ಮಾಣ, ವಿಗ್ರಹ ಪ್ರತಿಷ್ಠಾಪನೆ, ಜೀರ್ಣೋದ್ಧಾರ ಕಾರ್ಯ ಮುಂತಾದುವುಗಳ ವಿರುದ್ಧ ಶರಣರು ಬಂಡೆದ್ದರು. ವಚನ ಸಾಹಿತ್ಯದಲ್ಲಿ ಶರಣರು ಎಂಟುನೂರು ವರ್ಷಗಳ ಹಿಂದೆ ಕ್ರಿಯಾಶೀಲರಾಗಿ ತಮಗೆ ತೋಚಿದ ಮಾರ್ಗದಲ್ಲಿ ಪ್ರಾಮಾಣಿಕವಾಗಿ ನಡೆದರು: ಲಕ್ಷಾಂತರ ಜನರನ್ನು ತಮ್ಮೊಡನೆ ಕರೆದೊಯ್ದರು. ಎಲ್ಲ ಕ್ರಿಯೆಗಳ ಹಿಂದೆ ಜನಪರವಾದ ಧೋರಣೆಯಿದ್ದುದರಿಂದ ಅವರು ಪ್ರತಿಪಾದಿಸಿದ ವಿವಿಧ ಅಂಶಗಳು ಇಂದಿಗೂ ಪ್ರಸ್ತುತವಾಗಿ ತೋರುತ್ತವೆ.

**ಪರಾಮರ್ಶನ ಗ್ರಂಥಗಳು**


- ಕಲಬುರ್ಗಿ. ಎಂ.ಎಂ.. (2001). ವಚನ ಸಂಪುಟ ಭಾಗ–1. ಫ್ರೆಂಡ್ಸ್ ಡೌಮ್–ಟೆಕ್, ಬೆಂಗಳೂರು.
- ಚಂದ್ರಶೇಖರ್. ಟಿ.ಆರ್. (2004). ವಚನ ಸಂಸ್ಕೃತಿಯ ಸಾಮಜಿಕ ಆಯಾಮಗಳು. ಸಿ.ವಿ.ಜಿ.ಪಬ್ಲಿಕೇಷನ್ಸ್, ಬೆಂಗಳೂರು.
- ಕಟಿ. ಎಂ. ಬಿ. (2018). ವಚನಕಾರ್ತಿಯರು. ಕನ್ನಡ ಭಾಷಾ ಅಭಿವೃದ್ಧಿ ಯೋಜನೆ, ವಚನ ಸಂಪುಟ–19.
- ವೀರಣ್ಣ ರಾಜೂರ. (2001). ಶಿವಶರಣೆಯರ ವಚನ ಸಂಪುಟ. ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.